ಅ) ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ವಿಶೇಷ ಅನುದಾನವನ್ನು ಸರ್ಕಾರ ನಿಗಧಿ ಪಡಿಸಿದೆಯೇ;

ಆ) ಹಾಗಿದ್ದಲ್ಲಿ, ಈವರೆಗೆ ಎಷ್ಟು ಹಣ ಬಿಡುಗಡೆ ಮಾಡಿದೆ;

ಇ) ಬೆಂಗಳೂರು, ಮೈಸೂರು ರಸ್ತೆಯನ್ನು, ವಾಹನ ಸಂಚಾರದ ಒತ್ತಡಕ್ಕೆ ಅನುಗುಣವಾಗಿ ಹಾಗೂ ಅವಶ್ಯಕತೆಗೆ ತಕ್ಕಂತೆ, ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಹೌದು.

ಆ) ಪ್ರತಿ ವಿಧಾನಸಭಾ ಮತ ಕ್ಷೇತ್ರಕ್ಕೆ ಲೋಕೋಪಯೋಗಿ ಇಲಾಖೆ ರಸ್ತೆ, ಮತ್ತು ಸೇತುವೆಗಳ ಅಭಿವೃದ್ಧಿಗಾಗಿ 10.00 ಲಕ್ಷ ರೂ.ಗಳ ಅನುದಾನ ನಿಗದಿಪಡಿಸಿದ್ದು. ಜನವರಿ 94ರ ವರೆವಿಗೆ ಒಟ್ಟು 300 ಲಕ್ಷ ರೂ. ಹಣ ಬಿಡುಗಡೆ ಮಾಡಿದೆ.

ಇ) ಬೆಂಗಳೂರು-ಮೈಸೂರು ರಸ್ತೆಯಲ್ಲಿ ಹೆಚ್ಚಿರುವ ಸಂಚಾರದಟ್ಟಣೆಯನ್ನು ಅನುಸರಿಸಿ, ಈ ರಸ್ತೆಯಲ್ಲಿ ಅವಶ್ಯವಾಗಿರುವ ಭಾಗಗಳನ್ನು ಅಗಲಪಡಿಸುವುದು, ತಿರುವುಗಳನ್ನು ನೇರ ಪಡಿಸುವುದು, ಮಧ್ಯಂತರ ಮೀಡಿಯನ್ ನಿರ್ಮಿಸುವುದು, ಪ್ರತಿಫಲನ ಎಚ್ಚರಿಕೆ ಸೂಚನಾ ಫಲಕಗಳನ್ನು ಕ್ಯಾಟ್ ಐ ಗಳನ್ನು ಅಳವಡಿಸುವುದು, ಮರು ಡಾಂಬರೀಕರಣ ಮಾಡುವುದು ಮಂತಾದ ಕ್ರಮಸಗಳನ್ನು ತೆಗೆದುಕೊಳ್ಳಲಾಗಿದೆ. 1993-94ರ ಸಾಲಿನಲ್ಲಿ ಸುಮಾರು 150.00 ಲಕ್ಷ ರೂ.ಗಳ ಒಟ್ಟು ವೆಚ್ಚದಲ್ಲಿ ಈ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ರಾಜ್ಯದಲ್ಲಿ ಹೊಸ ಜಲವಿದ್ಯುತ್ ಯೋಜನೆಗಳು

248 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ಜಲವಿದ್ಯುತ್ ಯೋಜನೆಗಳನ್ನು ಸ್ಥಾಪಿಸುವ ಪ್ರಸ್ತಾವನೆ ಇದೆಯೇ?

ಆ) ರಾಜ್ಯದಲ್ಲಿನ ವಿದ್ಯುತ್ ಪ್ರಮಾಣ ಕೊರತೆ ಇಷ್ಟು?

ಇ) ಹೊಸ ವಿದ್ಯುತ್ ಯೋಜನೆಗಳನ್ನು ನಿರ್ಮಿಸಲು ಯೋಜಿಸಲಾಗಿರುವ ಯೋಜನೆಗಳ ಹೆಸರುಗಳು ಯಾವುವು?

ಈ) ಆಫನಾಶಿನಿ ಯೋಜನೆ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) ;

ಅ) ಇದೆ.

ಆ) ರಾಜ್ಯದಲ್ಲಿ 31-3-1993ರಲ್ಲಿ ವಿದ್ಯುತ್ ಪ್ರಮಾಣ ಕೊರತೆ ಈ ಕೆಳಗಿನಂತಿತ್ತು.

ಕರ್ನಾಟಕ ವಿದ್ಯುತ್ ನಿಗಮ	ಗರಿಷ್ಟ ಬೇಡಿಕೆ ಮೆ.ವ್ಯಾಟ್ಗಳಲ್ಲಿ	ವಿದ್ಯುತ್ ಉತ್ಪಾದನೆ ದಶಲಕ್ಷ ಯೂನಿಟ್ ಗಳಲ್ಲಿ
ವಿದ್ಯುತ್ ಪ್ರಮಾಣದ ಬೇಡಿಕೆ	3300	20950
ವಿದ್ಯುತ್ ಪ್ರಮಾಣದ ಲಭ್ಯತೆ (ಕೇಂದ್ರ ಸರ್ಕಾರದ ಪ್ರಮಾಣ ಸೇರಿ)	2643	17163
ಕೊರತೆ	657	3787
ಶೇಖಡವಾರು ಕೊರತೆ	19.9	18.1

ಕರ್ನಾಟಕ ವಿದ್ಯುತ್ ಮಂಡಳಿ 1993-94ನೇ ಸಾಲಿನಲ್ಲಿ ವಿದ್ಯುತ್ ಕೊರತೆಯ ಪ್ರಮಾಣ 4500 ದಶಲಕ್ಷ ಯೂನಿಟ್‌ಗಳು.

ಇ) ಪ್ರಸ್ತುತ ನಿರ್ಮಾಣಗೊಳ್ಳುತ್ತಿರುವ ವಿದ್ಯುತ್ ಯೋಜನೆಗಳಲ್ಲದೇ ಕರ್ನಾಟಕ ವಿದ್ಯುತ ನಿಗಮವು ಹೊಸದಾಗಿ ಹಮ್ಮಿಕೊಂಡಿರುವ ಯೋಜನೆಗಳ ಹೆಸರುಗಳು ಹಾಗೂ ಅವುಗಳ ಉತ್ಪಾದನಾ ಸಾಮರ್ಥ್ಯ ಈ ಕೆಳಗಿನಂತಿವೆ :

ಅ) ಜಲವಿದ್ಯುತ್ ಯೋಜನೆಗಳು :

1)	ಶಿವನಸಮುದ್ರ ಜಲವಿದ್ಯುತ್ ಯೋಜನೆ	:	270 ಮೆ. ವ್ಯಾಟ್
2)	ಆಲಮಟ್ಟಿ ಅಣೆಕಟ್ಟು ಜಲವಿದ್ಯುತ್ ಯೋಜನೆ	:	268 ಮೆ. ವ್ಯಾಟ್
3)	ತಮಣ್ಯಲ್ ಜಲವಿದ್ಯುತ್ ಯೋಜನೆ	:	800 ಮೆ. ವ್ಯಾಟ್
4)	ಬೇಡ್ತಿ ಜಲವಿದ್ಯುತ್ ಯೋಜನೆ	:	210 ಮೆ. ವ್ಯಾಟ್
5)	ದಾಂಡೇಲಿ ಜಲವಿದ್ಯುತ್ಯೋಜನೆ	:	60 ಮೆ. ವ್ಯಾಟ್
6)	ಮಹಾದಾಯಿ ಜಲವಿದ್ಯುತ್ ಯೋಜನೆ	:	345 ಮೆ. ವ್ಯಾಟ್
7)	ಸರಪಾಡಿ ಜಲವಿದ್ಯುತ್ ಯೋಜನೆ	:	90 ಮೆ. ವ್ಯಾಟ್

ಆ) ಶಾಖೋತ್ಪನ್ನ ವಿದ್ಯುತ್ ಯೋಜನೆಗಳು :

1)	ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ ಮೂರನೆಯ ಹಂತ ಘಟಕ - 5	:	500 ಮೆ. ವ್ಯಾಟ್.
2)	ವಿಜಯನಗರ ಶಾಖೋತ್ಪನ್ನ ವಿದ್ಯುತ್‌ಕೇಂದ್ರ (ಹೊಸಕೋಟೆ) 1 ಮತ್ತು 2ನೇ ಹಂತ	:	1500 ಮೆ. ವ್ಯಾಟ್
3)	ಮೈಸೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ, 1 ಮತ್ತು 2ನೇ ಹಂತ.	:	1500 ಮೆ. ವ್ಯಾಟ್
4)	ಮಂಗಳೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ	:	1300 ಮೆ. ವ್ಯಾಟ್

ಇದಲ್ಲದೇ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಇನ್ನೂ ಕೆಲವು ಜಲ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸುವ ಸ್ಥಳಗಳನ್ನು ಗುರುತಿಸಿದೆ. ಈ ಯೋಜನೆಗಳ ವಿವರವಾದ ಅನ್ವೇಷಣಾ ಕಾರ್ಯವು ಪ್ರಗತಿಯಲ್ಲಿದೆ.

ಈ) ಅಘನಾಶಿನ ಜಲವಿದ್ಯುತ್ ಯೋಜನೆಯು ಇನ್ನೂ ಅನ್ವೇಷಣಾ ಹಂತದಲ್ಲಿರುತ್ತದೆ. ಈ ಯೋಜನಾ ವರದಿ ತಯಾರಿಸಿದ ನಂತರ ಯೋಜನೆಯನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಸರ್ಕಾರ ಪರಿಶೀಲಿಸುವುದು.

ಸೇಡಂ ತಾಲ್ಲೂಕಿನ ಕಾಗಿನ ನದಿಗೆ ಮಿನಾಬಾಳ್ ಸಮೀಪ ಹಾಗೂ ಅಡಕಿ ಸಮೀಪ ಅಡ್ಡಲಾಗಿ ಸೇತುವೆ ನಿರ್ಮಾಣ

206 - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಮಿನಬಾಳ ಸಮೀಪ ಕಾಗಿನ ನದಿಗೆ ಹಾಗೂ ಅಡಕಿ ಸಮೀಪ ನದಿಗೆ ಅಡ್ಡಲಾಗಿ ಬ್ಯಾರೇಜ್-ಕಂ-ಸೇತುವೆ ನಿರ್ಮಾಣ ಮಾಡಲು ಕಾರ್ಯದರ್ಶಿ ನೀರಾವರಿ ಇಲಾಖೆಯವರಿಗೆ ಮಾನ್ಯ ಮುಖ್ಯ ಮಂತ್ರಿಯವರ ಪತ್ರ ಸಂಖ್ಯೆ : 1293 :ಎಂಎಲ್‌ಎ : (2) 93 ದಿನಾಂಕ - 8-4-93ರಂದು ಅಂದಾಜು ಪಟ್ಟಿ ತಯಾರಿಸಿ ಕಡತ ಒಪ್ಪಿಸಲು ಆದೇಶ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ